# ಪುರಾತನ ಕರ್ಪೂರದ ಗೊಂಬೆ

ಶಿವಮೊಗ್ಗದ ಶೋಭಾ ಸುಂದರೇಶ್ ಅವರ ಮನೆಯಲ್ಲಿರುವ ಈ ವಿಶೇಷ ಗೊಂಬೆ ಸುಮಾರು ನೂರು ವರ್ಷ ಹಳೆಯದು. ಶೋಭಾ ಅವರ ಅತ್ತೆಯ ಅತ್ತೆಯ ಕಾಲದ್ದಂತೆ ಕರ್ಪೂರದಿಂದ ಮಾಡಲಾಗಿರುವ ಈ ಅಪರೂಪದ ಗೊಂಬೆ. ಇದು ಅವರ ಅಣ್ಣ ಚಿಕ್ಕವರಿದ್ದಾಗ ತಂಗಿಗೆ ಪ್ರೀತಿಯ ಪ್ರತೀಕವಾಗಿ ನೀಡಿದ ಗೊಂಬೆಯಂತೆ. ಇದನ್ನು ಪರಂಪರಾನುಗತವಾಗಿ ಜೋಪಾನವಾಗಿ ಕಾಪಾಡಿಕೊಂಡು ಬಂದಿರುವುದು ಅತ್ತೆಸೊಸೆಯರ ಬಾಂಧವ್ಯಕ್ಕೆ ಸಾಕ್ಷಿಯಂತಿದೆ.

**-ರೇಖಾ ನವೀನಕುಮಾರ್, ಹೊಸದುರ್ಗ**





# ಪರಿಸರ ಸ್ನೇಹಿ ಈ ಗಣೇಶ

ಗಣೇಶನ ಹಬ್ಬಕ್ಕೆ ತರಹೇವಾರು ವಿಗ್ರಹಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದರೂ ಕೆಲವು ಕಲಾವಿದರು ತಮಗೆ ಬೇಕಾದ ಗಾತ್ರದ, ಇಷ್ಟವಾದ ಭಂಗಿಯ ಗಣಪನನ್ನು ತಮ್ಮ ಕೈಯಾರೆ ಸೃಷ್ಟಿಸಿ ಸೃಜನಶೀಲತೆ ಮೆರೆಯುತ್ತಾರೆ.

ಈ ನಿಟ್ಟಿನಲ್ಲಿ ಖ್ಯಾತ ಕಲಾವಿದ ವೆಂಕಿ ಪಲಿಮಾರು ಅವರ ಪರಿಕಲ್ಪನೆಯೇ ವಿಭಿನ್ನವಾಗಿದೆ. ಅವರು ವಿನ್ಯಾಸಗೊಳಿಸಿದ ಹತ್ತಡಿ ಎತ್ತರದ ಈ ಪರಿಸರ ಸ್ನೇಹಿ ಗಣೇಶನ ಕಂಡು ಕೊಂಡಾಡದವರಿಲ್ಲ. ಈ ಗಣೇಶನಿಂದ ಜಲಮಾಲಿನ್ಯದ ಭಯವಿಲ್ಲ; ಪರಿಸರಕ್ಕೆ ಯಾವ ಅಪಾಯವೂ ಇಲ್ಲ. ಬಳಸಿರುವ ಕಚ್ಚಾವಸ್ತುಗಳನ್ನು ಬಿಚ್ಚಿ ಜತನದಿಂದ ಕಾಪಿಟ್ಟರೆ ಮುಂದಿನ ವರ್ಷವೂ ಮತ್ತೆ ಪ್ರತ್ಯಕ್ಷನಾಗುತ್ತಾನೆ!

**-ರಾಮಚಂದ್ರ ಪೈ ಆರ್., ಮೂಡುಬಿದಿರೆ**

# ಹಾವಿನ ಭಯ ಮರೆತ ಕಪ್ಪೆ

ಹಾವು ಕಂಡರೆ ಕಪ್ಪೆಗೆ ಪ್ರಾಣ ಭಯ! ಹಾವಿನ ಇಷ್ಟದ ಆಹಾರದಲ್ಲಿ ಕಪ್ಪೆಯೂ ಒಂದು. ಆದರೆ ಭಯ ಮರೆತ ಮಂಡೂಕವೊಂದು, ತನ್ನ ಶತ್ರು ನಾಗರ ಹಾವಿನ ಜೊತೆ ಕೆಲವು ಸಮಯ ಕಳೆದು ಅಚ್ಚರಿ ಮೂಡಿಸಿದೆ. ಈ ದೃಶ್ಯವು ಉಡುಪಿ ಸಾಲಿಗ್ರಾಮದ ಸುಧೀಂದ್ರ ಐತಾಳ್ ಅವರ ಮನೆಯಲ್ಲಿ ಕಂಡು ಬಂತು. ಹಸಿವಾದಾಗ ಮಾತ್ರ ಹಾವು ತನ್ನ ಆಹಾರ ಸರಪಳಿಯ ಕ್ರಮದಲ್ಲಿ ಒಳಪಡುವ ಜೀವಿಗಳನ್ನು ಭಕ್ಷಿಸುತ್ತದೆ.

**-ತಾರಾನಾಥ್ ಮೇಸ್ತ ಶಿರೂರು, ಬೈಂದೂರು**

